**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 21 /2022**

| | | | |
|---|---|---|---|
| ಹೆಸರು | ಃ | ಆರ್. ಅನಿಲ್ ಜತಾಫ್ | ಸಿ.ಡಬ್ಲ್ಯೂ 4 |
| ತಂದೆಯ ಹೆಸರು | ಃ | ರಾಘವೇಂದ್ರರಾವ್ | ಪಿ.ಡಬ್ಲ್ಯೂ 3 |
| ವಯಸ್ಸು | ಃ | 52 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸ ಸ್ಥಳ | ಃ | ಹೆಗ್ಗೊಡಲು ಗ್ರಾಮ | |

**ಸಾಕ್ಷಿಗೆ ದಿನಾಂಕಃ 27.09.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .**

**1.** ಚಾಸಾ 1 ರಿಂದ 3 ರವರು ನನಗೆ ಗೊತ್ತು. ನಿಪಿ.2 ರಲ್ಲಿರುವ ಸಹಿ ನನ್ನದೇ. ಸಹಿಯನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ದಿನಾಂಕ 22.10.2021 ರಂದು ಪೊಲೀಸರು ಮಾರಗೌಡನಹಳ್ಳಿ ಮತ್ತು ಹೆಗ್ಗೊಡಲು ಗ್ರಾಮದ ಟಿಕೆ ಹಳ್ಳಿ ಜಂಕ್ಷನ್ ಗೆ ಮಹಜರ್ ಮಾಡಲು ಬಂದಿದ್ದರು, ಆಗ ನಾನು ಸಹಿ ಮಾಡಿರುತ್ತೇನೆ. ಆ ಹಿಂದಿನ ದಿನ ಪ್ರಭುಸ್ವಾಮಿ ರವರ ಪತ್ನಿ ಲಲಿತ ರವರ ಮೊಬೈಲ್, ವ್ಯಾನಿಟೀ ಬ್ಯಾಕ್ ಮತ್ತು ಸರ ಕಳ್ಳತನವಾಗಿರುವ ಬಗ್ಗೆ ಹಲಗೂರು ಪೊಲೀಸರು ಬಂದಿದ್ದರು. ಆಗ ಸಮಯ ಬೆಳಗ್ಗೆ 10.15 - 10.45 ಗಂಟೆ ಆಗಿತ್ತು. ಆ ಸಂದರ್ಭ ಚಾ.ಸಾ.3 ರವರು ಸಹಾ ಹಾಜರಿದ್ದರು. ಚಾ.ಸಾ.2 ರವರು ಚಾ.ಸಾ.3 ರವರ ಮನೆಗೆ ಬಂದಿದ್ದರು. ಚಾ.ಸಾ.2 ರವರ ಗಂಡನನನ್ನು ನಾವು ರಾಗಿಬೊಮ್ಮನಹಳ್ಳಿ ಪ್ರಭು ಎಂದು ಕರಿತೇವೆ.

**(ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು).**

**<u>ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ</u> .**

**2.** ಆ ದಿನ ಚಾ.ಸಾ.1 ರವರು ಪೊಲೀಸರಿಗೆ ಸ್ಥಳ ತೋರಿಸಿರುತ್ತಾರೆ ಎಂದರೆ ಸರಿ. ಆ ದಿನ ಅವರ ಪತ್ನಿ ಜೊತೆಗೆ ಇದ್ದರು. ಅವರು ಸಹ ಆ ದಿನ ಸ್ಥಳದಲ್ಲಿಯೇ ಸಹಿ ಮಾಡಿದರು.

**<u>ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಎಸ್.ವಿ.ಎಸ್. ವಕೀಲರಿಂದಃ</u>**

**3.** ದಿನಾಂಕ 22.10.2021 ರಂದು ಬೆಳಗ್ಗೆ 10-00 ರಿಂದ 10.30 ರ ಸಮಯದಲ್ಲಿ ಪೊಲೀಸರು ಹೆಗ್ಗೊಡು - ಮಾರಗೌಡನಹಳ್ಳಿ ಟಿ.ಕೆ.ಹಳ್ಳಿಯ ಜಂಕ್ಷನ್ ಬಳಿ ಮಹಜರ್ ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಂದರ್ಭ ಚಾ.ಸಾ.1 ರಿಂದ 3 ರವರು ಹಾಜರಿದುದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.1 ರವರು ಪೊಲೀಸರಿಗೆ ಸ್ಥಳ ತೋರಿಸಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾ.ಸಾ.1 ಮತ್ತು 3 ರವರು ಸಹಿ ಮಾಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ರ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರಿಂದ 3 ರವರು ನನಗೆ ಪರಿಚಿತರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**.**

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.